# ಕಲೆಯ ಧ್ಯಾನ.. ತಂತ್ರಜ್ಞಾನದ ತ್ರಾಣ

**ಕನ್ನಡ ಚಿತ್ರರಂಗದ ಇಬ್ಬರು ಮೇರು ನಟರಾದ ರಾಜ್‌ಕುಮಾರ್ ಮತ್ತು ವಿಷ್ಣುವರ್ಧನ್ ಇಬ್ಬರ ಜತೆಗೂ ಸಿನಿಮಾ ಮಾಡಿದ ನಿರ್ದೇಶಕ ಭಾರ್ಗವ. ಅವರ ಜತೆ ಮಾತಿಗೆ ಕುಳಿತರೆ ಕನ್ನಡ ಚಿತ್ರರಂಗವನ್ನು ಗಟ್ಟಿಗೊಳಿಸಿದ ಹಳೆಯ ಬೇರುಗಳು ಮತ್ತು ಸೊಂಪಾಗಿ ಬೆಳೆದು ತೊನೆಯುತ್ತಿರುವ ಹೊಸ ಚಿಗುರುಗಳು ಎರಡರ ಕಡೆಗೂ ಚರ್ಚೆ ತುಯ್ಯುತ್ತದೆ. ಹುಣಸೂರು ಕೃಷ್ಣಮೂರ್ತಿ ಅವರ ನಿರ್ದೇಶನದ 'ಬಬ್ರುವಾಹನ' ಮತ್ತು ಸಿದ್ದಲಿಂಗಯ್ಯ ನಿರ್ದೇಶನದ 'ಬೂತಯ್ಯನ ಮಗ ಅಯ್ಯು' – ಈ ಎರಡು ಚಿತ್ರಗಳಿಗೆ ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿದ ಅನುಭವಗಳನ್ನು ಅವರು ವಿಶೇಷವಾಗಿ ಸ್ಮರಿಸುತ್ತಾರೆ. ಈ ಎರಡು ಚಿತ್ರಗಳಿಗೆ ಕೆಲಸ ಮಾಡಿದ ಅನುಭವದ ಹಿನ್ನೆಲೆಯಲ್ಲಿ ಇಂದಿನ ತಂತ್ರಜ್ಞಾನ ಪ್ರಧಾನವಾದ ಸಿನಿಮಾ ತಯಾರಿಕೆಯ ಕುರಿತಾಗಿ ಅವರು ಹಂಚಿಕೊಂಡಿರುವ ಅನಿಸಿಕೆಗಳನ್ನು ಅವರ ಮಾತಿನಲ್ಲಿಯೇ ಓದಿ.**

★ ನಿರೂಪಣೆ: ಪದ್ಮನಾಭ ಭಟ್ ಶೇವ್ಕಾರ್

**ಭಾರ್ಗವ ಹಿನ್ನೋಟ**

ಕನ್ನಡದ ಮೊದಲ ವಾಕ್ಚಿತ್ರ 'ಸತಿ ಸುಲೋಚನಾ' ಬಂದಿದ್ದು 1934ರಲ್ಲಿ. ಪ್ರಾರಂಭದಲ್ಲಿ ಅಷ್ಟೊಂದು ಧೈರ್ಯ ಮಾಡಿ ಕನ್ನಡದಲ್ಲಿ ಸಿನಿಮಾವನ್ನು ಮಾಡಿದರಲ್ಲ, ಅವರನ್ನು ನಾವು ಇಂದು ನೆನಪಿಸಿಕೊಳ್ಳಬೇಕು. ಈಗ ಕನ್ನಡ ಸಿನಿಮಾಗಳು ನಾಲ್ಕು ಸಾವಿರದ ಗಡಿ ದಾಟಿರಬಹುದು. ಈ ನಾಲ್ಕು ಸಾವಿರಕ್ಕಿಂತ ಮೊದಲು, ಕನ್ನಡದಲ್ಲಿ ಮೊದಲು ಸಿನಿಮಾ ಚಟುವಟಿಕೆಗಳನ್ನು ಆರಂಭಿಸಿದರಲ್ಲ, ಆ ಭೀಷ್ಮನಿಗೆ ನಾವು ನಿಜವಾಗಿಯೂ ನಮಿಸಬೇಕು.

ಕನ್ನಡದಲ್ಲಿ ಮೊದಮೊದಲು ಬಂದಿದ್ದು ಹೆಚ್ಚಾಗಿ ಜಾನಪದ, ಭಕ್ತಿಪ್ರಧಾನ ಮತ್ತು ಪೌರಾಣಿಕ ಚಿತ್ರಗಳೇ. ರಾಮಾಯಣ, ಮಹಾಭಾರತದ ಗೊತ್ತಿರುವ ಕಥೆಗಳನ್ನೇ ಸಿನಿಮಾ ಮಾಡುತ್ತಿದ್ದರು. ಮತ್ತು ಆಗ ಕನ್ನಡ ಚಿತ್ರರಂಗವನ್ನು ಕಟ್ಟಿ ಬೆಳೆಸಿದ ಸುಬ್ಬಯ್ಯ ನಾಯ್ಡು, ಹೊನ್ನಪ್ಪ ಭಾಗವತರ್, ಗುಬ್ಬಿವೀರಣ್ಣ ನಂತರ ರಾಜಕುಮಾರ್, ಉದಯಕುಮಾರ್ ಇವರೆಲ್ಲರೂ ರಂಗಭೂಮಿ ಹಿನ್ನೆಲೆಯಿಂದಲೇ ಬಂದವರು. ಆದ್ದರಿಂದಲೇ ನಟನೆ, ಸಂಗೀತಜ್ಞಾನ ಎಲ್ಲವೂ ಅವರಲ್ಲಿ ಇರುತ್ತಿತ್ತು.

ತಾಂತ್ರಿಕವಾಗಿಯೂ ಇಂದು ಸಾಕಷ್ಟು ಬದಲಾವಣೆಗಳು ಆಗಿವೆ. ಧ್ವನಿಮುದ್ರಣದಲ್ಲಿ ಮೊದಲೆಲ್ಲ ಎರಡೇ ಟ್ರ್ಯಾಕ್ ಇರುತ್ತಿತ್ತು. ಹಾಡಿನಲ್ಲಿ ಏನಾದರೂ ತಪ್ಪಾಗಿಹೋಯ್ತು ಎಂದಾದರೆ ಆರ್ಕೆಸ್ಟ್ರಾ ಜತೆ ಹಿನ್ನೆಲೆ ಗಾಯಕನೂ ಮೊದಲಿನಿಂದ ಹಾಡಬೇಕಾಗುತ್ತಿತ್ತು. ಕೊನೆಗೆ ನಾಲ್ಕು ಟ್ರ್ಯಾಕ್ ಬಂತು. ಮತ್ತೆ ತಂತ್ರಜ್ಞಾನ ಬೆಳೆಯುತ್ತ ನಾಲ್ಕರಿಂದ ಎಂಟಾಯ್ತು, ಎಂಟು ಹದಿನಾರಾಯ್ತು, ಹದಿನಾರರಿಂದ ಇಪ್ಪತ್ನಾಲ್ಕು ಟ್ರ್ಯಾಕ್ ಆಯ್ತು. ಈಗ ಮಲ್ಟಿಟ್ರ್ಯಾಕ್ ಆಗಿದೆ. ಈಗ ತಂತ್ರಜ್ಞಾನದ ಯುಗದಲ್ಲಿ ಹಾಡಿನಲ್ಲಿ ಒಂದು ಪದ ತಪ್ಪಿದೆ ಎಂದಾದರೆ, ಆ ಪದಕ್ಕೆ ಪಂಚ್ ಇನ್ ಮತ್ತು ಪಂಚ್ ಔಟ್ ಮಾಡುವ ಮೂಲಕ ಅಷ್ಟನ್ನೇ ಬದಲಾಯಿಸಿ ಬಿಡಬಹುದು. ಹಿಂದೆ ಮಾಡುತ್ತಿದ್ದಂತೆ, ಗಾಯಕ ಮೊದಲಿನಿಂದಲೇ ಹಾಡಬೇಕಾದ ಅವಶ್ಯಕತೆ ಇಲ್ಲವೇ ಇಲ್ಲ.

ಆಧುನಿಕ ತಂತ್ರಜ್ಞಾನ ಎಷ್ಟೇ ಬೆರಗು ಮೂಡಿಸಿದರೂ ನನ್ನ ಅನಿಸಿಕೆಯ ಪ್ರಕಾರ, ಮೊದಲಿನ ಸಿನಿಮಾಗಳಲ್ಲಿಯೇ ನಿಜವಾದ ಕಲೆ ಇತ್ತು. ಇಂದು ತಂತ್ರಜ್ಞಾನದ ಆವಿಷ್ಕಾರ ಮತ್ತು ಕಂಪ್ಯೂಟರ್ ಗ್ರಾಫಿಕ್ಸ್‌ಗಳಿಂದ ಎಲ್ಲವೂ ಸುಲಭವಾಗಿಬಿಟ್ಟಿವೆ. ಇದರಿಂದ ಸಿನಿಮಾ ತಯಾರಿಕೆಯಲ್ಲಿ ನಿರ್ದೇಶಕರ ಶ್ರಮ, ಕಲಾವಿದರ ಶ್ರಮ ಎಲ್ಲವೂ ಕಡಿಮೆಯಾಗಿವೆ. ತಂತ್ರಜ್ಞಾನದ ಆವಿಷ್ಕಾರದಿಂದ 'ಬಾಹುಬಲಿ'ಯಂಥ ಅದ್ಭುತ, ಮೈಮರೆಸುವ ಸಿನಿಮಾಗಳು ತಯಾರಾಗುತ್ತಿವೆ.

ಆದರೆ ಹಿಂದೆ ಹೀಗಿರಲಿಲ್ಲ. 'ಬಬ್ರುವಾಹನ' ಸಿನಿಮಾದಲ್ಲಿ ನಾನು ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿದ್ದೇನೆ. ನನ್ನ ಚಿಕ್ಕಪ್ಪ ಹುಣಸೂರು ಕೃಷ್ಣಮೂರ್ತಿಗಳೇ ಅದರ ನಿರ್ದೇಶಕರು. ಆ ಸಿನಿಮಾವನ್ನೇ ಉದಾಹರಣೆಯಾಗಿ ತೆಗೆದುಕೊಳ್ಳೋಣ. ಆ ಸಿನಿಮಾದಲ್ಲಿ ಯುದ್ಧದ ಸನ್ನಿವೇಶವನ್ನು ಚಿತ್ರೀಕರಣ ಮಾಡಬೇಕಾದಾಗ ಮದ್ರಾಸ್‌ನಲ್ಲಿ ಐದು ಸಾವಿರ ಜನರನ್ನು ಸೇರಿಸಿದ್ದೆವು. ಒಂದು ಬತ್ತಿಹೋದ ಕೆರೆಯಲ್ಲಿ ಐದು ಸಾವಿರ ಜನರನ್ನು ಇಟ್ಟುಕೊಂಡು ಯುದ್ಧಭೂಮಿಯನ್ನು ರೂಪಿಸಿದ್ದೆವು.

ಯುದ್ಧಕ್ಕೆ ರಣರಂಗ ಸಿದ್ಧವಾಗುತ್ತದಲ್ಲ, ಆಗ ಒಂದು ಪಡೆಯ ಸೈನಿಕರು ನಿಲ್ಲುವುದು ಸ್ವಸ್ತಿಕ್ ಥರ ಇರಬೇಕು. ಇನ್ನೊಂದು ಪಡೆ

